ದಿನಾಂಕ : 05.08.2024

ಅಸಲು ದಾವೆ: 79/2021 ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : ಪ್ರತಿವಾದಿ1(ಬಿ) ಪರ ವಕೀಲರಾದ ಶ್ರೀ ಎಂ.ಜೆ.ಜೆ. ರವರಿಂದ :</u>**

ನಮ್ಮ ತಂದೆ ಜೀವಂತ ಇರುವಾಗ ಕುಟುಂಬದ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು, ನಮ್ಮ ಕುಟುಂಬಕ್ಕೆ 5 ರಿಂದ 6 ಎಕರೆ ಜಮೀನು ಇರುತ್ತದೆ. ನಿಮ್ಮ ತಂದೆಯವರು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದಾಗ ಜಮೀನಿನ ಬಾಬ್ತು ಸಾಲ ತೆಗೆದುಕೊಳ್ಳುವುದು, ತೀರುವಳಿ ಮಾಡುವುದು, ಮಾಡುತ್ತಿದ್ದರಾ ಎಂದರೆ ಸಾಕ್ಷಿ ಸಾಲ ಮಾಡುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ತಂದೆ 1988 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ಕುಟುಂಬದ ವ್ಯವಹಾರಗಳನ್ನು ನಾನೇ ಮಾಡುತ್ತಿದ್ದೇನೆ.1988 ರಿಂದ ನೀವೇ ಕುಟುಂಬದ ವ್ಯವಹಾರ ಮಾಡುತ್ತಿರುವುದರಿಂದ ಯಾವ ಯಾವ ಸರ್ವೆ ನಂಬರ್ ಜಮೀನುಗಳಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಇದೆ ಎಂಬ ಬಗ್ಗೆ ನಿಮಗೆ ತಿಳಿದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ವಗೈರೆಗಳ ದಾಖಲಾತಿಗಳನ್ನು ನಾನು ಕಾಲಕಾಲಕ್ಕೆ ತೆಗೆದುಕೊಳ್ಳುತ್ತಾ ಬಂದಿದ್ದೇನೆ ಎಂದರ ಸರಿ. ಅದೇ ರೀತಿ ಕುಟುಂಬದ ಆಸ್ತಿಗಳ ಬಾಬ್ತು ಕಂದಾಯವನ್ನು ಕಾಲಕಾಲಕ್ಕೆ ಪಾವತಿಸುತ್ತಾ ಬಂದಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ನೀವು ವ್ಯವಹಾರ ಮಾಡಲು ಪ್ರಾರಂಭಿಸಿದ ನಂತರ ಯಾವುದಾದರೂ ಬ್ಯಾಂಕಿನಿಂದ ಸಾಲ ವಗೈರೆ ಮಾಡಿದ್ದುಂಟಾ ಎಂದರೆ ಸಾಕ್ಷಿ ಹೌದು ಸೋಮನಹಳ್ಳಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಲ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಒಂದೇ ಸರ್ವೆ ನಂಬರ್ ಜಮೀನಿನ ಆಧಾರದ ಮೇಲೆ ನಾನು ಬ್ಯಾಂಕಿನಿಂದ ಸಾಲ ಮಾಡಿರುತ್ತೇನೆ. ಸಾಲವನ್ನು ಎಷ್ಟು ಬಾರಿ ನವೀಕರಣ ಮಾಡಿದ್ದೀರಿ ಎಂದರೆ ಸಾಕ್ಷಿ ನವೀಕರಣ ಮಾಡಿಲ್ಲ ಕಬ್ಬನ್ನು ಫ್ಯಾಕ್ಟರಿಗೆ ಸಾಗಾಣಿಕೆ ಮಾಡುತ್ತಿದ್ದೆವು, ಅಲ್ಲಿಂದಲೇ ಹಣ ಬ್ಯಾಂಕಿಗೆ ಸಂದಾಯ ಆಗುತ್ತಿತ್ತು.

ಕಬ್ಬು ಬೆಳೆ ಕಟಾವು ಆದ ನಂತರ ಕೆ.ಎಂ.ದೊಡ್ಡಿ ಚಾಮುಂಡೇಶ್ವರಿ ಫ್ಯಾಕ್ಟರಿಗೆ ಸಾಗಾಟ ಮಾಡಲು ಒಪ್ಪಿಗೆ ಪತ್ರ ಮಾಡಿಕೊಂಡಿದ್ದೆವು. ಒಪ್ಪಿಗೆ ಕಾರ್ಡ್ ನಲ್ಲಿ ಯಾವ ಯಾವ

ಸರ್ವೆ ನಂಬರ್ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸದರಿ ಫ್ಯಾಕ್ಟರಿಗೆ ಸರಬರಾಜು ಮಾಡಲಾಗುವುದು ಎಂದು ಬರೆಯಲಾಗಿತ್ತಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಂಬಂಧಪಟ್ಟ ಒಪ್ಪಿಗೆಯ ಕಾರ್ಡ್ ಗಳು ನಿಮ್ಮ ಬಳಿ ಇವೆಯಾ ಎಂದರೆ ಸಾಕ್ಷಿ ಕೆಲವು ಇವೆ, ಕೆಲವು ಕಳೆದು ಹೋಗಿವೆ ಎಂದು ಉತ್ತರಿಸುತ್ತಾರೆ. ಲಭ್ಯವಿರುವ ಒಪ್ಪಿಗೆ ಕಾರ್ಡ್ ಗಳನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಆಗುವುದಿಲ್ಲ, ಎಲ್ಲೆಲ್ಲೋ ಹಾಕಿರುತ್ತೇವೆ ಎಂದು ಉತ್ತರಿಸುತ್ತಾರೆ. ಸುಮಾರು 2 ವರ್ಷಗಳಿಂದ ಚಾಮುಂಡೇಶ್ವರಿ ಫ್ಯಾಕ್ಟರಿಗೆ ಕಬ್ಬು ಸರಬರಾಜು ಮಾಡುವುದನ್ನು ನಿಲ್ಲಿಸಿರುತ್ತೇನೆ. ನೀವು ಯಾವ ಯಾವ ಸರ್ವೆ ನಂಬರ್ ಜಮೀನುಗಳ ಕಬ್ಬು ಬೆಳೆಯನ್ನು ಸರಬರಾಜು ಮಾಡುವುದಾಗಿ ಒಪ್ಪಿ ಮಾಡಿಕೊಟ್ಟ ದಾಖಲಾತಿಗಳು ಚಾಮುಂಡೇಶ್ವರಿ ಷುಗರ್ ಫ್ಯಾಕ್ಟರಿಯಲ್ಲಿ ಲಭ್ಯವಿರುತ್ತವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಫ್ಯಾಕ್ಟರಿಯಿಂದ ದಾಖಲಾತಿಗಳನ್ನು ಪಡೆದು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಆಗುವುದಿಲ್ಲ, ನಂಬಿಕೆಯ ಮೇಲೆ ಬೇರೆ ಬೇರೆಯವರ ಹೆಸರಿನಲ್ಲಿ ಕಬ್ಬು ಸರಬರಾಜು ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿಮ್ಮ ಒಟ್ಟು ಕುಟುಂಬದ ವ್ಯವಹಾರದ ಬಾಬ್ತು ನಿಮಗೆ ಬೇಕಾದವರ ಹೆಸರಿನಲ್ಲಿ ವ್ಯವಹಾರಗಳನ್ನು ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಹಾಗಾಗಿ ನಿಮಗೆ ಆಸ್ತಿಗಳ ನಿರ್ವಹಣೆ ಎಲ್ಲವೂ ಚೆನ್ನಾಗಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

ನಿಮ್ಮ ತಂದೆಯವರು ತೀರಿಕೊಂಡ ನಂತರ ಒಟ್ಟು ಕುಟುಂಬದ ಆಸ್ತಿಗಳ ಬಾಬ್ತು ಯಾರ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ನನ್ನ ಹೆಸರಿಗೆ ಎಂದು ಉತ್ತರಿಸುತ್ತಾರೆ. ಸುಮಾರು 10 ವರ್ಷಗಳ ನಂತರ ಅಂದರೆ 1998-99 ರಲ್ಲಿ ನನ್ನ ಹೆಸರಿಗೆ ಖಾತಾ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ಆ ಸಂದರ್ಭದಲ್ಲಿ ಕಂದಾಯ ಅಧಿಕಾರಿಗಳಿಗೆ ಯಾವ ಯಾವ ಸರ್ವೆ ನಂಬರ್ ಗಳಲ್ಲಿ ನಮಗೆ ಆಸ್ತಿ ಇದೆ ಎಂಬ ವಿವರಣೆಯನ್ನು ನಾನೇ ಕೊಟ್ಟಿರುತ್ತೇನೆ ಎಂದರೆ ಸರಿ. ಆ ರೀತಿ ಖಾತೆ ವರ್ಗಾವಣೆ ಮಾಡಿಸಿಕೊಂಡ ಸಮಯದಲ್ಲಿ ನಿಮ್ಮ ಕುಟುಂಬದ ಯಾವುದಾದರೂ ಸ್ವತ್ತಿನ ಸರ್ವೆ ನಂಬರ್ ತಪ್ಪಾಗಿದೆ ಎಂದು ಹೇಳಿ ಸರಿಪಡಿಸಿಕೊಡುವಂತೆ ಹೇಳಿ ಕಂದಾಯ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದುಂಟಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯವರು ಜೀವಿತವಿದ್ದಾಗ ಆ ರೀತಿ ಯಾವುದಾದರೂ ಸರ್ವೆ ನಂಬರ್ ತಪ್ಪಾಗಿದೆ ಎಂದು ಅದನ್ನು ಸರಿಪಡಿಸಿಕೊಡುವಂತೆ ಕೋರಿ ನಿಮ್ಮ ತಂದೆಯವರು ಕಂದಾಯ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದುಂಟಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಸಂಬಂಧಪಟ್ಟ ಕಂದಾಯ ಇಲಾಖೆಯಿಂದ ಪಡೆದುಕೊಳ್ಳಲು ನಾನೇ ಹೋಗಿರುತ್ತೇನೆ. ನೀವು ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವ ಮುಂಚೆ ಅದರಲ್ಲಿ ಬರೆದಿರುವ ಅಂಶಗಳನ್ನು ಓದಿ ತಿಳಿದುಕೊಂಡು ನಂತರ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಉಲ್ಲೇಖಿಸಿರುವ ಇತರೆ ಸ್ವತ್ತುಗಳ ದಾಖಲಾತಿಗಳನ್ನು ಪರಿಶೀಲಿಸಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸರ್ವೆ ನಂ. 245/1 ರ 1969-70 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ಆರ್.ಟಿ.ಸಿ.ಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಪಡೆದಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ಮೇಲೆ ಹೇಳಿದ ಆರ್.ಟಿ.ಸಿ. ಗಳನ್ನು ಈ ಕೇಸ್ ಹಾಕುವ ಸಂದರ್ಭದಲ್ಲಿ ನಿಮ್ಮ ವಕೀಲರಿಗೂ ಸಹಾ ತೋರಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಮೇಲೆ ಹೇಳಿದ ಆರ್.ಟಿ.ಸಿಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಲು ನಿಮಗೆ ತೊಂದರೆ ಏನು ಇಲ್ಲ ಎಂದರೆ ಸಾಕ್ಷಿ ಆಗುವುದಿಲ್ಲ ತೆಗೆದುಕೊಂಡಿರುತ್ತೇವೆ ಎಲ್ಲಾದರೂ ಹಾಕಿರುತ್ತೇವೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.245/1 ರ ಆರ್.ಟಿ.ಸಿ ಪಡೆದುಕೊಂಡಿರುವುದಾಗಿ ಹೇಳಿದ್ದೀರಿ, ಸದರಿ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ ಹೇಳಲು ಆಗುವುದಾ ಎಂದರೆ ಸಾಕ್ಷಿ 4 ಎಕರೆ 26 ಗುಂಟೆ ಅದರಲ್ಲಿ 16 ಗುಂಟೆ ಖರಾಬು ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ 4 ಎಕರೆ 26 ಗುಂಟೆಯಲ್ಲಿ ಒಟ್ಟು 4 ಜನರ ಹೆಸರಿಗೆ ಆರ್.ಟಿ.ಸಿ. ಬರುತ್ತಿದೆ. ಕರಿಗೌಡ, ಸಿದ್ದೇಗೌಡ, ಚನ್ನೇಗೌಡ ಮತ್ತು ಸಿದ್ದೇಗೌಡ ರವರ ಹೆಸರುಗಳು ಆರ್.ಟಿ.ಸಿ. ಯಲ್ಲಿ ಬರುತ್ತಿವೆ. ನಿಮಗೆ ತಿಳಿದ ಮಟ್ಟಿಗೆ ಬಿ.ಲಿಂಗೇಗೌಡರವರ ಹೆಸರಿಗೆ ಸರ್ವೆ ನಂ.245/1 ರಲ್ಲಿ ಖಾತೆ ಇದದ್ದು ಉಂಟಾ ಎಂದರೆ ಸಾಕ್ಷಿ ಇತ್ತು ಎಂದು ಉತ್ತರಿಸುತ್ತಾರೆ. ಸರ್ವೆ ನಂ.245/1 ರಲ್ಲಿ ಬಿ.ಲಿಂಗೇಗೌಡರವರ ಹೆಸರಿಗೆ ಖಾತೆ ಇದ್ದ ಬಾಬ್ತು ಮ್ಯೂಟೇಷನ್ ಮತ್ತು ಆರ್.ಟಿ.ಸಿ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ತೆಗೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಆ ದಾಖಲೆಗಳನ್ನು ಸಹಾ ನೀವು ಈ ಕೇಸ್ ಹಾಕುವ ಸಂದರ್ಬದಲ್ಲಿ ನಿಮ್ಮ ವಕೀಲರಿಗೆ ತೋರಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ನಿಮಗೆ ತೊಂದರೆ ಏನಾದರೂ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ಬಿ.ಲಿಂಗೇಗೌಡರವರು ಈಗ ಜೀವಿತವಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿಯವರು ತೀರಿಕೊಂಡು ಎಷ್ಟು ವರ್ಷಗಳಾಯಿತು ಎಂದು ನನಗೆ

ಗೊತ್ತಿಲ್ಲ. ಬಿ.ಲಿಂಗೇಗೌಡರ ಜೀವಿತ ಕಾಲದಲ್ಲಿ ನೀವು ಯಾವಾಗಲಾದರೂ ಅವರನ್ನು ಬೇಟಿ ಮಾಡುವ ಪ್ರಸಂಗ ಬಂದಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.ಈ ಕೇಸ್ ಹಾಕುವ ಮುಂಚಿತವಾಗಲಿ ಅಥವಾ ನಂತರವಾಗಲಿ ಬಿ.ಲಿಂಗೇಗೌಡರ ಕುಟುಂಬದ ಸದಸ್ಯರನ್ನು ಬೇಟಿ ಮಾಡುವ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಈವರೆವಿಗೂ ಬಿ.ಲಿಂಗೇಗೌಡರ ಕುಟುಂಬದ ಸದಸ್ಯರಿಗೆ ನೋಟೀಸ್ ಕೊಡುವ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಬಿ.ಲಿಂಗೇಗೌಡರ ಕುಟುಂಬದವರ ಮೇಲೆ ಈವರೆವಿಗೆ ಕಂದಾಯ ನ್ಯಾಯಾಲಯದಲ್ಲಿ ಆಗಲಿ ಅಥವಾ ಸಿವಿಲ್ ನ್ಯಾಯಾಲಯದಲ್ಲಿ ಆಗಲಿ ಯಾವುದಾದರೂ ಪ್ರಕರಣ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಬಿ.ಲಿಂಗೇಗೌಡರವರ ಕುಟುಂಬದ ಸದಸ್ಯರ ಮೇಲೆ ಯಾವುದೇ ಕೇಸು ವಗ್ಯೆರೆ ಹಾಕಲು ತೊಂದರೆ ಏನು ಇರಲಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಾವು ಮತ್ತು ಬಿ.ಲಿಂಗೇಗೌಡರ ಕುಟುಂಬದ ಸದಸ್ಯರು ಚೆನ್ನಾಗಿದ್ದೇವೆ ಎಂದರೆ ಸರಿ. ಬಿ.ಲಿಂಗೇಗೌಡರ ತಂದೆಯ ಹೆಸರು ಗೆಂಡೇಬೋರೆಗೌಡ ಎಂದರೆ ಸರಿ. ಸದರಿ ಗೆಂಡೆಬೋರೇಗೌಡರವರಿಗೆ ಬೋರೆಗೌಡ, ಸಿದ್ದೇಗೌಡ, ಚನ್ನೇಗೌಡ, ಕರಿಗೌಡ ಮತ್ತು ಬಿ.ಲಿಂಗೇಗೌಡ ಎಂಬ 5 ಜನ ಮಕ್ಕಳು ಎಂದರೆ ಸರಿ. ಈ ದಾವೆಯ 1 ನೇ ಪ್ರತಿವಾದಿ ಸಿದ್ದೇಗೌಡರ ತಂದೆಯ ಹೆಸರು ಗೆಂಡೆಬೋರೇಗೌಡ. ಗೆಂಡೆಬೋರೇಗೌಡರ ಮೊಮ್ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಅದನ್ನು ನಾನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿರುವುದಿಲ್ಲ. ನಾನು ಕೇಸ್ ಹಾಕಿರುವ 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಊರಿನವರೇ. ನಮ್ಮ ಮತ್ತು ಅವರ ಒಂದೇ ಬೀದಿಯಲ್ಲಿ ಮೇಲೆ ಮತ್ತು ಕೆಳಗಡೆ ಇರುತ್ತದೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.